# AL-QADISA
EDU ACADEMY
KAVALKATTE

AL QADISA EDU ACADEMY KAVALKATTE



## ಅರಿವು ಮತ್ತು ಆಧ್ಯಾತ್ಮ
ಆಧುನಿಕತೆಯ ಸ್ಪರ್ಶದೊಂದಿಗೆ



# ಅಲ್ ಖಾದಿಸಾ

## ಎಜುಕೇಶನಲ್ ಅಕಾಡೆಮಿ ಕಾವಲಕಟ್ಟೆ

ಅಲ್ ಖಾದಿಸಾ ಎಜುಕೇಶನಲ್ ಅಕಾಡೆಮಿ ಎಂಬ ಈ ಸಂಸ್ಥೆಯು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನಲ್ಲಿದೆ. ಬಿಸಿರೋಡ್ - ಬೆಳ್ತಂಗಡಿ ರಸ್ತೆಯಲ್ಲಿ 15 ಕಿಲೋಮೀಟರ್ ಸಾಗಿದರೆ ಸಿಗುವ ಕಾವಳಕಟ್ಟೆಯ ಬೆಂಗತೋಡು ಎಂಬಲ್ಲಿ ಸುಮಾರು 25 ಎಕ್ರೆ ವಿಶಾಲವಿರುವ ರಮ್ಯವಾದ ಪ್ರದೇಶದಲ್ಲಿ ತಲೆಯೆತ್ತುತ್ತಿದೆ. 'ಕಾವಳಕಟ್ಟೆ ಹಝ್ರತ್' ಎಂದು ಪ್ರಸಿದ್ಧಿ ಹೊಂದಿರುವ ಹಝ್ರತ್ ಮುಹಮ್ಮದ್ ಫಾಳಿಲ್ ರಝ್ವಿಯವರ ನಾಯಕತ್ವದಲ್ಲಿ ವಿದ್ವಾಂಸರು ಮತ್ತು ಉಮರಾಗಳು ಸೇರಿದ ಒಂದು ತಂಡವು ಈ ಸಂಸ್ಥೆಯನ್ನು ಮುನ್ನಡೆಸುತ್ತಿದೆ.

**ಅಲ್ ಖಾದಿಸಾದ ಲಕ್ಷ್ಯ**

ಶಿಕ್ಷಣ ಮತ್ತು ಆಧ್ಯಾತ್ಮಿಕತೆ—ಜಗತ್ತನ್ನು ಸುಧಾರಿಸಲು ಮತ್ತು ಶಾಂತಿಯನ್ನು ಸ್ಥಾಪಿಸಲು ಅಗತ್ಯವಿರುವ ಮೂಲ ಮಂತ್ರಗಳಿವು. ಶಿಕ್ಷಣದಿಂದ ಸಮಾಜ ಸುಧಾರಣೆಯಾದರೆ, ಆಧ್ಯಾತ್ಮಿಕತೆಯಿಂದ ಜಗತ್ತಿನಲ್ಲಿ ಶಾಂತಿ ನೆಲೆಸುತ್ತದೆ. ಯಾವುದೇ ಸಮುದಾಯವು ತನ್ನನ್ನು ಸುಧಾರಣೆಯತ್ತ ಕೊಂಡೊಯ್ಯಲು ಶಿಕ್ಷಣಕ್ಕೆ ಆದ್ಯತೆಯನ್ನು ನೀಡುತ್ತದೆ.

ಆರುವರೆ ಕೋಟಿಯಷ್ಟು ಜನಸಂಖ್ಯೆ ಇರುವ ಕರ್ನಾಟಕದಲ್ಲಿ ಸುಮಾರು 80 ಲಕ್ಷ ಮುಸ್ಲಿಮರಿದ್ದಾರೆ. ಇಸ್ಲಾಂ ಶಿಕ್ಷಣಕ್ಕೆ ಅತ್ಯಂತ ಹೆಚ್ಚಿನ ಮಹತ್ವ ನೀಡಿದ್ದರೂ ಭಾರತೀಯ ಮುಸ್ಲಿಮರು ಅನೇಕ ಕಾರಣಗಳಿಂದ ಶಿಕ್ಷಣದಲ್ಲಿ ಹಿಂದೆ ಬಿದ್ದಿದ್ದಾರೆ. ಅವರನ್ನು ಶೈಕ್ಷಣಿಕವಾಗಿ ಮುಂದಕ್ಕೆ ತರುವ ಪ್ರಯತ್ನಗಳು ನಡೆಯುತ್ತಲೇ ಇವೆ. ಕರ್ನಾಟಕದಲ್ಲಿ ಇದರ ಭಾಗವಾಗಿ ಅನೇಕ ಶಿಕ್ಷಣ ಸಂಸ್ಥೆಗಳು ತಲೆಯೆತ್ತಿವೆ. ಪ್ರತಿಯೊಂದು ಸಮುದಾಯವೂ ತಮ್ಮದೇ ಆದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸಮಾಜ ಸುಧಾರಣೆಗೆ ಯತ್ನಿಸುತ್ತಿದೆ. ಶೈಕ್ಷಣಿಕವಾಗಿ ಸಮಾಜವನ್ನು ಮೇಲೆತ್ತುವ ಪ್ರಯತ್ನದ ಒಂದು ಭಾಗವಾಗಿದೆ ಅಲ್ ಖಾದಿಸಾ.

ಆಧುನಿಕ ಜಗತ್ತು ಶೈಕ್ಷಣಿಕವಾಗಿ ಬೆಳೆದು ಬರುತ್ತಿರುವ ಜೊತೆಗೆ ಕೆಡುಕುಗಳು ಎಲ್ಲೆಡೆ ವ್ಯಾಪಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಸುಧಾರಣೆಯ ದಾರಿ ತೋರಿಸಬೇಕಾದ ಶಿಕ್ಷಣಾಲಯಗಳು ಇಂದು ಕೆಡುಕುಗಳಿಂದ ತುಂಬಿವೆ. ಆರ್ಥಿಕ ಸುಧಾರಣೆ, ಶೈಕ್ಷಣಿಕ ಜಾಗೃತಿ, ಜಾಗತೀಕರಣ ಮುಂತಾಗಿ ಎಲ್ಲ ಪ್ರಗತಿಯ ದಾರಿಗಳು ತೆರೆದುಕೊಂಡಂತೆ, ಕೆಡುಕುಗಳು ಹೆಚ್ಚು ವ್ಯಾಪಕಗೊಂಡಿವೆ ಎನ್ನುವುದು ಸತ್ಯ. ಮನುಷ್ಯರ ನಡುವೆ ಸ್ನೇಹ ಸಂಬಂಧಗಳು ಕಡಿಮೆಯಾಗುತ್ತಿವೆ. ದ್ವೇಷ, ಹಗೆ ಸಾಧನೆಗಳು ಹೆಚ್ಚುತ್ತಿವೆ. ಅನೈತಿಕತೆ, ಅವ್ಯವಹಾರಗಳು ಹರಡುತ್ತಿವೆ. ಮನುಷ್ಯನು ನೆಮ್ಮದಿಯನ್ನು ಕಳಕೊಂಡಿದ್ದಾನೆ.

ಮನುಷ್ಯರ ನಡುವೆ ಶಾಂತಿ, ಪ್ರೀತಿ, ಸಹಬಾಳ್ವೆಯ ನೆಮ್ಮದಿಯ ವಾತಾವರಣದ ಅನಿವಾರ್ಯತೆ ಇದೆ. ಇದಕ್ಕೆ ಬೇಕಾದುದು ದೇವಭಯ ಮತ್ತು ಆಧ್ಯಾತ್ಮಿಕತೆ. ಆಧ್ಯಾತ್ಮಿಕತೆ ಇಲ್ಲದಿದ್ದರೆ ಬದುಕು ಅರ್ಥ ಕಳಕೊಳ್ಳುತ್ತದೆ. ಆದ್ದರಿಂದ, ಶಿಕ್ಷಣದ ಜತೆಗೆ ಆಧ್ಯಾತ್ಮಿಕತೆಯನ್ನು ಸಮಾಜದಲ್ಲಿ ನೆಲೆಯೂರಿಸುವ ಪ್ರಯತ್ನವನ್ನು ಅಲ್ ಖಾದಿಸಾ ನಡೆಸುತ್ತದೆ. ಈ ಮಹತ್ವಪೂರ್ಣ ಕೆಲಸಕ್ಕೆ ಅಲ್ ಖಾದಿಸಾ ತನ್ನನ್ನು ಸಮರ್ಪಿಸಿದೆ.

ದೇವಭಯವುಳ್ಳ ಸುಶಿಕ್ಷಿತ ಸಮಾಜದ ನಿರ್ಮಾಣಕ್ಕಾಗಿ, ಅಲ್ ಖಾದಿಸಾ ಸಮಾಜದ ಎಲ್ಲ ಸ್ತರಗಳಲ್ಲಿರುವವರಿಗೆ ತಲುಪುವಂತಹ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ.



### ಅಲ್ ಖಾದಿಸಾ ಸಂಸ್ಥೆಯ ಸ್ಥಾಪಕ

# ಡಾ. ಮುಹಮ್ಮದ್ ಫಾಝಿಲ್ ರಝ್ವಿ ಹಝ್ರತ್

ಅಲ್ ಖಾದಿಸಾ ಸಂಸ್ಥೆಯ ಸ್ಥಾಪಕ ಡಾಕ್ಟರ್ ಮುಹಮ್ಮದ್ ಫಾಝಿಲ್ ರಝ್ವಿ ಹಝ್ರತ್‌ರವರು ಮೂಲತಃ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದವರು. 1973ರಲ್ಲಿ ಮುಹಮ್ಮದ್ ಇಸ್ಮಾಯಿಲ್ - ಇಸ್ಮತುನ್ನಿಸಾ ದಂಪತಿಗಳ ಮಗನಾಗಿ ಜನಿಸಿದರು. ಶಾಲಾ ಶಿಕ್ಷಣವನ್ನು ಊರಿನಲ್ಲಿ ಮುಗಿಸಿ, ಹಾಸನದ ದಾರುಲ್ ಉಲೂಮ್ ಶಾಹೇ ಜಮಾಅತ್ ಶರೀಅ ಕಾಲೇಜಿನಲ್ಲಿ 1993ರಲ್ಲಿ ಫಾಝಿಲ್ ಪದವಿಯನ್ನು ಪಡೆದರು.

ಹಝ್ರತ್‌ರವರು ಫಾಝಿಲ್ ಪದವಿಯನ್ನು ಪಡೆದ ಬಳಿಕ ತಮ್ಮ ಸೇವೆಯನ್ನು ಕಾವಳಕಟ್ಟೆಯಲ್ಲಿ ಪ್ರಾರಂಭಿಸಿದರು. ಕರ್ಮಶಾಸ್ತ್ರದಲ್ಲಿ ಹನಫೀ ಮದ್‌ಹಬ್ ಸ್ವೀಕರಿಸಿರುವ ಹನಫೀ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಕಾವಳಕಟ್ಟೆಯ ಹನಫೀ ಜುಮಾ ಮಸೀದಿಯಲ್ಲಿ ಖತೀಬರಾಗಿ ಸೇವೆಯನ್ನು ಆರಂಭಿಸಿದ ಹಝ್ರತ್‌ರವರು, ಈ ಅವಧಿಯಲ್ಲಿ ತ್ವಿಬ್ಬುನ್ನಬವೀ ಚಿಕಿತ್ಸಾ ವಿಧಾನವನ್ನು ಕರಗತ ಮಾಡಿಕೊಂಡರು. ಜೊತೆಗೆ ಮನೆವೈದ್ಯವನ್ನೂ ಯೂನಾನೀ ಚಿಕಿತ್ಸೆಯನ್ನೂ ಅಭ್ಯಸಿಸಿದರು. ಖುರ್‌ಆನ್ ಸೂಕ್ತಗಳು, ದಿಕ್ರ್, ಅಸ್ಮಾಉಗಳ ಮೂಲಕ ಇರುವ ಆಧ್ಯಾತ್ಮಿಕ ಚಿಕಿತ್ಸಾ ವಿಧಾನದಲ್ಲೂ ಪರಿಣಿತಿಯನ್ನು ಪಡೆದರು.

ಕಾವಳಕಟ್ಟೆ ಮಸೀದಿಯ ಹತ್ತು ವರ್ಷಗಳ ಸೇವಾ ಅವಧಿಯ ಕೊನೆಯಲ್ಲಿ, ತಮ್ಮ ಬಳಿಗೆ ರೋಗರುಜಿನಗಳ ಸಹಿತ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಆಗಮಿಸುವ ಜನರಿಗೆ ಮಾರ್ಗದರ್ಶನ ನೀಡಲು ಪ್ರಾರಂಭಿಸಿದರು. ರೋಗ ಶಮನ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಪರಿಹಾರ ದೊರಕತೊಡಗಿದಾಗ, ಹಝ್ರತ್‌ರವರನ್ನು ಸಮೀಪಿಸಲು ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದರು. ಮಸೀದಿಯ ಸೇವೆಯನ್ನು ಮುಂದುವರಿಸಲು ಇದು ತೊಡಕಾದಾಗ, ಅಲ್ಲೇ ಹತ್ತಿರದಲ್ಲಿ ಪ್ರತ್ಯೇಕ ವ್ಯವಸ್ಥೆಯನ್ನು ಏರ್ಪಡಿಸಿ ಜನರ ಸಮಸ್ಯೆಗಳಿಗೆ ಸ್ಪಂದಿಸಿದರು. ಈ ಮೂಲಕ, ರಾಜ್ಯದ ವಿವಿಧೆಡೆಗಳಿಂದ ಸಮಸ್ಯೆಗಳನ್ನು ಹೊತ್ತು ಬರುವ ಸಾವಿರಾರು ಮಂದಿಗೆ ಆಶ್ರಯ ನೀಡಲು ಪ್ರಾರಂಭಿಸಿದರು.

ಹಝ್ರತ್‌ರವರ ನಾಯಕತ್ವದಲ್ಲಿ ನಡೆಯುತ್ತಿರುವ ಜಲಾಲಿಯಾ ಮಜ್ಲಿಸ್ ಇಲ್ಲಿನ ಒಂದು ಆಧ್ಯಾತ್ಮಿಕ ಆಕರ್ಷಣೆಯೆಂದು ಹೇಳಬಹುದು. ಸಯ್ಯಿದ್ ಆಟ್ಟಕ್ಕೋಯ ತಂಙಳ್‌ರವರ ಮಾರ್ಗದರ್ಶನದಂತೆ, 2004ರಲ್ಲಿ ಆರಂಭಗೊಂಡ ಜಲಾಲಿಯಾ ಮಜ್ಲಿಸ್, ಆಧ್ಯಾತ್ಮಿಕ ಅನುಭೂತಿಯ ಆಸ್ವಾದನೆಗೆ ಬರುವ ಸಾವಿರಾರು ಮಂದಿಗೆ ಮಾನಸಿಕ ನೆಮ್ಮದಿಯ ವಾತಾವರಣವನ್ನು ಸೃಷ್ಟಿಸುತ್ತದೆ.

ಪ್ರತಿ ತಿಂಗಳ ಮೊದಲನೇ ಆದಿತ್ಯವಾರ ರಾತ್ರಿ ನಡೆಯುವ ಈ ಮಜ್ಲಿಸ್, ವರ್ಷಕ್ಕೊಮ್ಮೆ ಉಲಮಾ ಸಾದಾತ್‌ಗಳ ನೇತೃತ್ವದಲ್ಲಿ ವಿಜೃಂಭಣೆಯೊಂದಿಗೆ ನಡೆಯುತ್ತದೆ.

ಜನರ ದೈಹಿಕ, ಮಾನಸಿಕ, ಕೌಟುಂಬಿಕ, ವ್ಯವಹಾರಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸಿದರೆ ಮಾತ್ರ ಬದುಕಿನ ಲಕ್ಷ್ಯ ಪೂರ್ಣಗೊಳ್ಳದು; ಸಮುದಾಯಕ್ಕೆ ಆಧ್ಯಾತ್ಮಿಕತೆ ಮತ್ತು ಶಿಕ್ಷಣವು ಅರ್ಥಪೂರ್ಣವಾಗಿ ದೊರಕುವ ವ್ಯವಸ್ಥೆಗಳನ್ನು ನೀಡಿದಾಗ ಮಾತ್ರ ಅದು ನಿಜವಾದ ಸೇವೆ ಎಂದು ಪರಿಗಣಿಸಬಹುದು. ಕಾಲೋಚಿತವಾದ ಶಿಕ್ಷಣ ಮತ್ತು ಪರಿಸರದ ಕೆಡುಕುಗಳಿಂದ ಮುಕ್ತಿ ಪಡೆಯಬಲ್ಲ ಆಧ್ಯಾತ್ಮಿಕತೆ—ಇವೆರಡನ್ನು ಸಮುದಾಯಕ್ಕೆ ನೀಡಬೇಕೆಂಬ ಅಗತ್ಯದ ಜತೆಗೆ, ಮುಂದಿನ ತಲೆಮಾರಿಗೆ ಬೆಳಕು ನೀಡಬಲ್ಲ ದೀಪಗಳನ್ನು ಸಿದ್ಧಪಡಿಸಿದರೆ ಮಾತ್ರ ಸಮುದಾಯವು ಉಳಿಯಲು ಸಾಧ್ಯ ಎಂದು ಹಝ್ರತ್‌ರವರು ಮನಗಂಡರು.

**ಅಲ್ ಖಾದಿಸಾ ಎಜುಕೇಶನಲ್ ಅಕಾಡೆಮಿ ಸ್ಥಾಪನೆ** 2015ರಲ್ಲಿ, ಹಝ್ರತ್‌ರವರು ಅಲ್ ಖಾದಿಸಾ ಎಜುಕೇಶನಲ್ ಅಕಾಡೆಮಿ ಎಂಬ ಸಂಸ್ಥೆಗೆ ರೂಪ ನೀಡಿದರು. ಸುಮಾರು 25 ಎಕರೆ ಸ್ಥಳವನ್ನು ಸಂಸ್ಥೆಗಾಗಿ ಖರೀದಿಸುವ ಗುರಿಯೊಂದಿಗೆ, ಸಮಾಜದ ಪ್ರಗತಿಯ ಕಾಳಜಿಯುಳ್ಳ ದಾನಿಗಳನ್ನು ಸಮೀಪಿಸಿದಾಗ, ಅಚ್ಚರಿಯಂತೆ ದಾನಗಳ ಕದಗಳು ತೆರೆದುಕೊಂಡವು. ಇದರಿಂದ ಅಲ್ ಖಾದಿಸಾ ಮೂಲಕ ಉದ್ದೇಶವಿಟ್ಟ ಯೋಜನೆಗೆ ಸಾಕಾಗುವಂತೆ, ಭೂಮಿಯನ್ನು ಹ್ರಸ್ವ ಅವಧಿಯಲ್ಲಿ ಖರೀದಿಸಲು ಸಾಧ್ಯವಾಯಿತು.

**ಹಝ್ರತ್‌ರವರ ವಿಶಿಷ್ಟ ವ್ಯಕ್ತಿತ್ವ**

- ಆಕರ್ಷಣೀಯ ವ್ಯಕ್ತಿತ್ವ,
- ಮುಖದಲ್ಲಿ ಸದಾ ಎದ್ದುಕಾಣುವ ಮಂದಹಾಸ,
- ಜನರೊಂದಿಗೆ ಪ್ರೀತಿತುಂಬಿದ ಒಡನಾಟ,
- ಯಾರ ಕರೆಗೂ ಓಗೊಡುವ ವಿನಯ,
- ಸೇವಾ ರಂಗದಲ್ಲಿ ಆಯಾಸರಹಿತ ಸಾನಿಧ್ಯ,
- ಹೃದಯ ತುಂಬಿದ ಪ್ರವಾದಿ ಪ್ರೇಮ,
- ಆಧ್ಯಾತ್ಮಿಕ ಮಾರ್ಗದರ್ಶಕರೊಂದಿಗಿರುವ ನಿರಂತರ ಸಂಪರ್ಕ.







# ಅಲ್ ಖಾದಿಸ

## ಇಂಗ್ಲಿಷ್ ಮೀಡಿಯಂ ಸ್ಕೂಲ್

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂದು ವಿದ್ಯಾಲಯಗಳ ಕೊರತೆ ಇಲ್ಲ. ನವನವೀನ ಕಾಲೇಜುಗಳು ಎಲ್ಲೆಡೆ ತಲೆ ಎತ್ತುತ್ತಿವೆ. ಆದರೆ, ಪರಿಸರದ ಕೆಡುಕುಗಳಿಂದ ಮುಕ್ತವಾದ, ಕಲಿಕೆಗೆ ಪೂರಕವಾದ ಮತ್ತು ಉತ್ತಮ ಗುಣ ಪಾಠಗಳೊಂದಿಗೆ ಮಕ್ಕಳನ್ನು ಬೆಳೆಸುವ ಶೈಕ್ಷಣಿಕ ಕ್ಯಾಂಪಸ್‌ಗಳ ಅಗತ್ಯ ಮತ್ತು ಬೇಡಿಕೆ ದಿನೇದಿನೇ ಹೆಚ್ಚುತ್ತಿದೆ.

ಸಮಾಜದ ಈ ಅಗತ್ಯಕ್ಕೆ ಸ್ಪಂದಿಸಲು ಮತ್ತು ಮಕ್ಕಳಿಗೆ ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ನೀಡುವ ಉದ್ದೇಶದಿಂದ, ಸೇವಾ ಮನೋಭಾವದೊಂದಿಗೆ 2015ರಲ್ಲಿ ಅಲ್ ಖಾದಿಸ ಇಂಗ್ಲಿಷ್ ಮೀಡಿಯಂ ಸ್ಕೂಲ್ ಸ್ಥಾಪಿತಗೊಂಡಿತು.

ವಿಶಾಲವಾದ, ಆಧುನಿಕ ಸೌಲಭ್ಯಗಳನ್ನು ಒಳಗೊಂಡ ಆಕರ್ಷಕ ಕಟ್ಟಡದಲ್ಲಿ, ಮಕ್ಕಳಿಗೆ ಶಾಲಾ ಶಿಕ್ಷಣದ ಜೊತೆಗೆ ವ್ಯವಸ್ಥಿತ ಮದ್ರಸಾ ಶಿಕ್ಷಣವನ್ನೂ ನೀಡಲಾಗುತ್ತಿದೆ.



# ಅಲ್ ಖಾದಿಸ

## ಕಾಲೇಜ್ ಆಫ್ ಇಸ್ಲಾಮಿಕ್ ದಅವಾ

ಎಸೆಸೆಲ್ಸಿ ಉತ್ತೀರ್ಣರಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಏಳು ವರ್ಷಗಳ ಅವಧಿಯಲ್ಲಿ ಲೌಕಿಕ ಮತ್ತು ಧಾರ್ಮಿಕ ಶಿಕ್ಷಣವನ್ನು ನೀಡುವ ಸಂಸ್ಥೆಯಿದು. ಪಿಯುವಿನಿಂದ ಪಿಜಿ ತನಕ ಪದವಿ ಶಿಕ್ಷಣದ ಜೊತೆಗೆ ಮುಕ್ತಸರ್ ಧಾರ್ಮಿಕ ಪದವಿ ಪಡೆಯುವ ಅವಕಾಶವಿದೆ.

ಹನಫೀ ವಿದ್ಯಾರ್ಥಿಗಳೊಂದಿಗೆ ಉರ್ದು ಭಾಷೆಯ ಪ್ರಯೋಗಾತ್ಮಕ ಕಲಿಕೆ ಸುಗಮಗೊಳ್ಳುತ್ತದೆ. ಇದಲ್ಲದೇ, ಮೋಡರ್ನ್ ಅರಬಿಕ್, ವ್ಯಕ್ತಿತ್ವ ವಿಕಸನ ಪಾಠ್ಯೇತರ ಚಟುವಟಿಕೆಗಳು, ಆಧ್ಯಾತ್ಮಿಕ ಮಜ್ಲಿಸ್‌ಗಳು, ಇಸ್ಲಾಮಿಕ್ ಇತಿಹಾಸ ಹಾಗೂ ಖಗೋಳ ಶಾಸ್ತ್ರದ ಪ್ರತ್ಯೇಕ ತರಗತಿಗಳು ಸೇರಿದಂತೆ ವೈವಿಧ್ಯಮಯ ತರಬೇತಿಗಳನ್ನು ನೀಡಲಾಗುತ್ತಿದೆ.

ಈ ತರಬೇತಿಗಳ ಮೂಲಕ ವಿದ್ಯಾರ್ಥಿಗಳ ಪ್ರತಿಭೆಯನ್ನು ಪೋಷಿಸಿ, ಸಮಾಜಕ್ಕೆ ಅಮೂಲ್ಯ ಕೊಡುಗೆಯಾಗುವ ಮುತ್ವಸ್ದಿಗಳನ್ನು ಅಲ್ ಖಾದಿಸಾ ರೂಪಿಸುತ್ತಿದೆ.

ನಾಳೆಯ ನಾಯಕತ್ವ ಬೆಳೆಸುವ ಈ ಕೇಂದ್ರದಲ್ಲಿ, ಈಗಾಗಲೇ ಕರ್ನಾಟಕದ 14 ಜಿಲ್ಲೆಗಳ ಶಾಫಿಈ ಮತ್ತು ಹನಫೀ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಇವರೆಲ್ಲರಿಗೂ ಆಹಾರ, ವಾಸ್ತವ್ಯ ಮತ್ತು ಶಿಕ್ಷಣವನ್ನು ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ.















# ಅಲ್ ಖಾದಿಸ

## ಝುಹ್‌ರತುಲ್ ಖುರ್‌ಆನ್ ಪ್ರೀ ಸ್ಕೂಲ್

ಇದು ಡಿಜಿಟಲ್ ಯುಗದಲ್ಲಿ ಬೆಳೆದುಬರುವ ಪುಟಾಣಿಗಳಿಗೆ ಪ್ರಾಚೀನ ಜ್ಞಾನ ಮತ್ತು ಆಧುನಿಕ ಶಿಕ್ಷಣವನ್ನು ಸಮನ್ವಯಗೊಳಿಸುವ ವಿಶಿಷ್ಟ ಪ್ರೀ-ಸ್ಕೂಲ್. ಇಂದು ಮಕ್ಕಳು ಸಣ್ಣ ಪ್ರಾಯದಲ್ಲೇ ತಂತ್ರಜ್ಞಾನ ಮತ್ತು ಹೊಸತನದ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ಈ ವಯಸ್ಸಿನಲ್ಲಿ ಅವರ ಬುದ್ಧಿಮತ್ತೆಯನ್ನು ತಕ್ಕ ಮಟ್ಟಿಗೆ ಅಭಿವೃದ್ಧಿಪಡಿಸುವುದರ ಜೊತೆಗೆ, ಆಧ್ಯಾತ್ಮಿಕ ಅರಿವು ನೀಡುವುದೇ ನಮ್ಮ ಉದ್ದೇಶ.

ಝುಹ್‌ರತುಲ್ ಖುರ್‌ಆನ್ ನರ್ಸರಿ ಸ್ಕೂಲ್ ಈ ಚಿಂತನೆಯ ಪ್ರತೀಕವಾಗಿದ್ದು, ಮೂರು ವರ್ಷ ಪ್ರಾಯದ ಮಕ್ಕಳು ಮೂರು ವರ್ಷದ ಸೂಕ್ತ ತರಬೇತಿಯ ಮೂಲಕ ಕೆಜಿ ತರಗತಿಗಳ ಅರಿವಿನ ಜೊತೆಗೆ, ಒಂದು ಕಾಂಡ ಖುರ್‌ಆನ್ ಕಂಠಪಾಠ ಮತ್ತು ಪಾರಾಯಣ ಕೌಶಲ್ಯವನ್ನು ಸಂಪಾದಿಸುತ್ತಾರೆ.

### ಪಾಠ್ಯಕ್ರಮದ ವಿಶೇಷತೆಗಳು:

- ಆಕರ್ಷಕ ಮತ್ತು ಮಕ್ಕಳು ಒಲಿಯುವ ಶಿಕ್ಷಣ ಪದ್ಧತಿ
- ಖುರ್‌ಆನ್ ಪಾರಾಯಣ ಹಾಗೂ ಕಂಠಪಾಠ ತರಬೇತಿ
- ಅರಬೀ ಅಕ್ಷರಗಳ ಸಮರ್ಪಿತ ಪಾಠ
- ನೈತಿಕ ಮೌಲ್ಯಗಳ ಬೋಧನೆ
- ಸಮಗ್ರ ಬೆಳವಣಿಗೆಗೆ ಪೋಷಕವಾದ ಶೈಕ್ಷಣಿಕ ಪರಿಸರ

# ಅಲ್ ಖಾದಿಸ

## ಪಿಯು ಕಾಲೇಜ್

ಕರ್ನಾಟಕ ಸರಕಾರದ ಮಾನ್ಯತೆಯನ್ನು ಪಡೆದು 2024ರಲ್ಲಿ ಅಲ್ ಖಾದಿಸಾ ಪಿಯು ಕಾಲೇಜು (ಬಾಲಕರ ವಿಭಾಗ) ಆರಂಭಗೊಂಡಿದೆ. ಇದೀಗ 2025 ರಿಂದ ಬಾಲಕಿಯರ ವಿಭಾಗವು ಆರಂಭಗೊಳ್ಳುತ್ತಿದ್ದು ಶರೀಅಃ ತರಗತಿಗಳೊಂದಿಗೆ ಪರಿಸರದ ಜನತೆಯ ಬೇಡಿಕೆಯೊಂದನ್ನು ಈಡೇರಿಸುತ್ತಿದೆ. ಅಧ್ಯಯನಕ್ಕೆ ಉತ್ತಮವಾದ ಪರಿಸರವನ್ನು ಸೃಷ್ಟಿಸಿ ಕಾಲೇಜು ಕ್ಯಾಂಪಸ್‌ಗಳಲ್ಲಿ ಇತ್ತೀಚಿನ ದಿನಗಳಲ್ಲಿ ವಕ್ಕರಿಸಿರುವ ಕೆಡುಕುಗಳಿಂದ ವಿದ್ಯಾರ್ಥಿಗಳನ್ನು ಸಂರಕ್ಷಿಸುವ ಹೊಣೆಯೊಂದಿಗೆ ಅರಿವು ಮತ್ತು ಆಧ್ಯಾತ್ಮಿಕತೆಯನ್ನು ನೀಡುವ ಬದ್ಧತೆಯೊಂದಿಗೆ ಅಲ್ ಖಾದಿಸಾ ಪಿಯು ಕಾಲೇಜು ಹೆಜ್ಜೆಯಿಡುತ್ತಿದೆ.

# ಅಲ್ ಖಾದಿಸ

## ಪ್ರೀ ದಅವಾ ಸ್ಕೂಲ್

ಶಾಲಾ ಕ್ಯಾಂಪಸ್‌ಗಳ ಕೆಡುಕುಗಳಿಂದ ಮಕ್ಕಳನ್ನು ಮುಕ್ತವಾಗಿಸಿ ಧಾರ್ಮಿಕ ಶಿಕ್ಷಣದ ಜೊತೆಗೆ ಶಾಲಾ ಶಿಕ್ಷಣವನ್ನು ನೀಡುವ ಹಾಸ್ಟೆಲ್ ಸಹಿತವಿರುವ ಸಂಸ್ಥೆಯಾಗಿದೆ ಪ್ರೀ ದಅವಾ ಸ್ಕೂಲ್. 7 8 ಮತ್ತು 9ನೆಯ ತರಗತಿಗಳಿಗೆ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶ ನೀಡಲಾಗುತ್ತಿದ್ದು 2024 ರಲ್ಲಿ ಪ್ರೀ ದಅವಾ ಸ್ಕೂಲ್ ಆರಂಭಗೊಂಡಿದೆ. ದೃಶ್ಯ ಮಾಧ್ಯಮಗಳ ದಾಸರಾಗಿ ಸಮಯ ಪೋಲು ಮಾಡುತ್ತಿರುವ ಮಕ್ಕಳನ್ನು ವ್ಯವಸ್ಥಿತ ದಿನಚರಿ ಮೂಲಕ ವಿದ್ಯಾರ್ಥಿ ಜೀವನದ ಗುರಿಯತ್ತ ಕೊಂಡೊಯ್ಯಲು ಇಂತಹ ಸಂಸ್ಥೆಗಳು ಇಂದು ಅನಿವಾರ್ಯವೆನಿಸುತ್ತವೆ






# ಭವಿಷ್ಯದಲ್ಲಿ ಅಲ್ ಖಾದಿಸಾ

ವಿಶಾಲವಾದ 25 ಎಕ್ರೆ ಪ್ರದೇಶದಲ್ಲಿ ಅಲ್ ಖಾದಿಸಾ ಎಜು ಅಕಾಡೆಮಿ ಹಲವಾರು ಸಮಾಜಮುಖಿ ಸೇವಾ ಯೋಜನೆಗಳನ್ನು ಹಮ್ಮಿಕೊಂಡಿ.

**ಮುಖ್ಯ ಸೇವಾ ಯೋಜನೆಗಳು:**

**ವಿಕಾಸಾಶ್ರಮ – ವಿಶೇಷ ಮಕ್ಕಳಿಗೆ ಪ್ರತ್ಯೇಕ ತರಬೇತಿ**

- ಪ್ರಾಯಕ್ಕೆ ಹೊಂದಿಕೊAಡರೂ ಬುದ್ಧಿ ವಿಕಾಸಗೊಳ್ಳದ ಕಾರಣ ಇತರ ಮಕ್ಕಳೊಂದಿಗೆ ಬೆರೆಯಲಾಗದೆ ಬದುಕಿನ ಪ್ರಾಥಮಿಕ ಅವಶ್ಯಕತೆಗಳನ್ನು ನಿರ್ವಹಿಸಲಾಗದೆ ಕುಟುಂಬಕ್ಕೆ ಹೊರೆಯಾಗುವ ಮಕ್ಕಳಿಗೆ ಪ್ರೀತಿಯ ಧಾರೆ ಹರಿಸಿ, ಬದುಕಿಗೆ ಬೆಳಕು ತರುವ ಕೇಂದ್ರ.
- ಸಮರ್ಪಿತ ತರಬೇತಿ, ಮಾನಸಿಕ ಬೆಂಬಲ, ಮತ್ತು ಆತ್ಮವಿಶ್ವಾಸ ವೃದ್ಧಿಸುವ ವ್ಯವಸ್ಥೆ.

**ಮರ್ಹಮಃ ಉಚಿತ ವಸತಿ ಯೋಜನೆ**


- ಬಡತನದ ಕಾರಣ ನಿವಾಸವಿಲ್ಲದೆ ಸಂಕಷ್ಟ ಅನುಭವಿಸುವ ಕುಟುಂಬಗಳಿಗೆ ಉಚಿತ ವಸತಿ ನೀಡುವ ಯೋಜನೆ.
- ಮೂಲಭೂತ ಸೌಲಭ್ಯಗಳೊಂದಿಗೆ ಮಾನವೀಯ ಸೇವೆಯ ಸಂಕೇತ.

**ಹೆಣ್ಣು ಮಕ್ಕಳ ವಸತಿ ಶಾಲೆ**

- ಸುರಕ್ಷಿತ ವಾತಾವರಣದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುವ ವಿಶೇಷ ವಸತಿ ಶಾಲೆ.
- ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯ ಸಿಂಧು.

ಇವುಗಳ ಹೊರತಾಗಿ ಸಮುದಾಯದ ಉನ್ನತಿಗಾಗಿ ಇನ್ನಷ್ಟು ಹಿತಕರ ಯೋಜನೆಗಳ ಸಿದ್ಧತೆಯಲ್ಲಿರುವ ಅಲ್ ಖಾದಿಸಾ, ಶೈಕ್ಷಣಿಕ ಮತ್ತು ಸಾಮಾಜಿಕ ಸೇವೆಯಲ್ಲಿ ಶ್ರೇಷ್ಠತೆಯತ್ತ ಹೆಜ್ಜೆ ಹಾಕುತ್ತಿದೆ!

- ಅಲ್ ಖಾದಿಸಾ ಜಾಮಿಯಾ ಮಸ್ಜಿದ್
- ಅಲ್ ಖಾದಿಸಾ ಪದವಿ ಕಾಲೇಜು (ಬಾಲಕರ ವಿಭಾಗ)
- ಅಲ್ ಖಾದಿಸಾ ಪದವಿ ಕಾಲೇಜು (ಬಾಲಕಿಯರ ವಿಭಾಗ)
- ಅಲ್ ಖಾದಿಸಾ ಹಿಫ್ಝುಲ್ ಖುರ್‌ಆನ್ ಕಾಲೇಜು
- ಅಲ್ ಖಾದಿಸಾ ಕನ್ವೆನ್ಷನಲ್ ಸೆಂಟರ್
- ಅಲ್ ಖಾದಿಸಾ ಗರ್ಲ್ಸ್ ಹಾಸ್ಟೆಲ್
- ಅಲ್ ಖಾದಿಸಾ ಲೈಬ್ರರಿ ಮತ್ತು ಆಸ್ಟ್ರಾನಮೀ ಲ್ಯಾಬ್
- ಅಲ್ ಖಾದಿಸಾ ವಾಣಿಜ್ಯ ಕಟ್ಟಡ
- ಕೆಜಿ ಮಕ್ಕಳಿಗಾಗಿ ಪ್ಲೇ ಹೌಸ್
- ಅಲ್ ಖಾದಿಸಾ ಹೆಲ್ತ್ ಕ್ಲಿನಿಕ್
- ಅಲ್ ಖಾದಿಸಾ ಪಾರ್ಕ್ ಮತ್ತು ಗ್ರೌಂಡ್
- ಅಲ್ ಖಾದಿಸಾ ಆಡಳಿತ ಮತ್ತು ಅತಿಥಿ ಕೇಂದ್ರ











AL-QADISA

AL - QADISA










# Completed Projects

AL QADISA  DA'WAH COLLEGE (BOYS SECTION)

AL QADISA ZAHRATHUL QURAN

AL QADISA ENGLISH MEDIUM SCHOOL ( LIS)

AL QADISA PRE  DA'WAH SCHOOL ( BOYS SECTION)







# Ongoing Projects

AL QADISA MARHAMA VILLAGE

AL QADISA DIFFERENTLY ABLED CARE CENTER AND FACILITIES

AL QADISA DREAM CITY

# Upcoming Future Projects

- AL QADISA JAMIA MASJID
- AL QADISA DEGREE COLLEGE ( BOYS SECTION)
- AL QADISA DEGREE COLLEGE ( GIRLS SECTION)
- AL QADISA HIFZUL QURAN COLLEGE
- AL QADISA CONVENTIONAL CENTER
- AL QADISA GIRLS HOSTEL
- AL QADISA LIBRARY AND ASTRONOMY LAB
- AL QADISA COMMERCIAL BUILDINGS
- AL QADISA PLAY HOUSE FOR KG KIDS
- AL QADISA HEALTH CLINIC
- AL QADISA PARK AND GROUND
- AL QADISA ADMINISTRATIVE AND GUEST CENTER
- AL QADISA WWTP ( WASTE WATER TREATMENT PLANT)
- AL QADISA GREEN HOUSE

# ಅಲ್ ಖಾದಿಸ
ಅರಿವು ಮತ್ತು ಆಧ್ಯಾತ್ಮ

من الظلمات إلى النور




## ಅಲ್ ಖಾದಿಸಾ ದಅವಾ ಕಾಲೇಜಿನ ವಿದ್ಯಾರ್ಥಿಗಳ ಖರ್ಚು ವಿವರ

2025–26

| STUDENTS | 1 DAY | 1 WEAK | 1 MONTH |
|---|---|---|---|
| 1 | ₹ 200.00 | ₹ 1400.00 | ₹6000.00 |
| 10 | ₹ 2000.00 | ₹ 14000.00 | ₹60000.00 |
| 25 | ₹ 5000.00 | ₹ 35000.00 | ₹150000.00 |
| 50 | ₹ 10000.00 | ₹ 70000.00 | ₹300000.00 |
| 100 | ₹ 20000.00 | ₹140000.00 | ₹600000.00 |

| AL QADISA DAAWA COLLAGE | |
|---|---|
| **SPECIAL FOOD MENU 2024-25** | |
| CHICKEN BIRIYANI | ₹10000.00 |
| MUTTON BIRIYANI | ₹13000.00 |
| BEEF BIRIYANI | ₹11000.00 |
| GHEE RICE MUTTON CURRY | ₹12000.00 |
| GHEE RICE CHIKEN | ₹9000.00 |
| GHEE RICE BEEF | ₹10000.00 |
| **ORD FOOD** | |
| CHAPATHI VEG CURRY | ₹3500.00 |
| CHAPATHI CHICKEN CHILLY | ₹5000.00 |
| VEG PULAVO | ₹4000.00 |
| RICE VEG CURRY | ₹3500.00 |

AL-QADISA EDUCATIONAL AND CHARITABLE TRUST
UNION BANK OF INDIA
BRANCH : B. C. ROAD
ACCOUNT NO : 520101048622760
IFSC CODE : UBIN0916595

Paytm

+91 94806 99999 | +91 94815 15279
alqadisaedu@gmail.com

BENGATHODI, POST MOODUPADUKODI,
KAVALKATTE, BANTWAL,
DK, KARNATAKA- 574265